ತಾರೀಖು 18ನೆ ಡಿಸೆಂಬರ್ 1906.

ನಂ. ಆರ್. 6108 — ಫಾ. 44-06—4, ಮೈಸೂರು ಸರ್ವಿಸ್ ರೆಗ್ಯುಲೇಷನ್ಸುಗಳ 177ನೆ ಪ್ರಕರಣದ ಮೇರೆಗೆ ಮೈಸೂರು ಡಿಸ್ಟ್ರಿಕ್ಟಿನ ಜಂಗಲಿ ಸಬ್ ಅಸಿಸ್ಟೆಂಟ್ ಕಂಸರ್ವೇಟರಾದ ವಿ॥ ಜಿ. ಕೃಷ್ಣಮೂರ್ತಿ ನಾಯಡು ಯವರಿಗೆ 1906ನೆ ಇಸವಿಯ ಡಿಸೆಂಬರ್ 8ನೆ ತಾರೀಖಿನಿಂದ 8 ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 19ನೆ ಡಿಸೆಂಬರ್ 1906.

ನಂ. ಕೆ. 6145 ಫಾ. 7-05-9, 1900ನೆ ಇಸವಿಯ 11ನೆ ನಂಬರ್ ಮೈಸೂರು ಜಂಗಲಿ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ತೋರಿಸಿದ ಮೇರೆಗಳುಳ್ಳ ಪ್ರದೇಶವು, ಸದರಿ ಇಸ್ತಿಹಾರ್ನಾಮೆಯ ಕೆಳಗೆ ವಿವರಿಸಿರುವ ಹಕ್ಕುಗಳ ಜೆಲಾವಣಿಗೆ ಒಳಪಟ್ಟು, 1907ನೆ ಇಸವಿಯ ಜನವರಿ ಗುರ್ರೇ ಲಾಗಾಯಿತು "ಸಂಸ್ಥಾನ ಜಂಗಲಿ" ಎಂದು ಎಣಿಸಲ್ಪಡುವುದೆಂತ ಪ್ರಕಟಿಸಲು ಹುಕುಂ ದಯಪಾಲಿಸಿರುತ್ತಾರೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೂಕು, ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ	ತಾತ್ಕಾಲಿಕ ಹೆಸರು.	ಚತುರ್ಗಡಿ.
ಬೆಂಗಳೂರು.	ಚನ್ನಪಟ್ಟಣ.	193 ಚದರ ಮೈಲಿ.	ಕುರಣಗೆರೆ.	ಉತ್ತರಕ್ಕೆ :— ಮರ್ಜನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 8 ಸರಪಣಿಗಳ ದೂರದಲ್ಲಿ ಬಂದು ಸ್ಥಳದಿಂದ ಎಲ್ಲೆಯ ರೇಖೆಯು ಹೊರಟು ಈಶಾನ್ಯಕ್ಕೆ ಆ ಸರ್ವೆ ನಂಬರಿನ ಉತ್ತರ ಮೇರೆಯಲ್ಲಿ ಅದರ ಈಶಾನ್ಯ ಮೂಲೆಗೂ, ಅಲ್ಲಿಂದ ಬಿಲಕೆರೆ ಗ್ರಾಮದ ಸರ್ವೆ 44ನೆ ನಂಬರಿನ ದಕ್ಷಿಣ ಭಾಗದಲ್ಲಿ ಅದರ ಆಗ್ನೇಯ ಮೂಲೆಗೂ ಹೋಗುತ್ತದೆ. ಪೂರ್ವಕ್ಕೆ :— ಅಲ್ಲಿಂದ ಆಗ್ನೇಯಕ್ಕೆ ಗೋವಿಂದನಹಳ್ಳಿ ಸರ್ವೆ 71ನೆ ನಂಬರಿನ ಪಶ್ಚಿಮ ಭಾಗದಲ್ಲಿ ಕುರಣಗೆರೆ ಗ್ರಾಮದ ಸರ್ವೆ 148ನೆ ನಂಬರಿನ ವಾಯವ್ಯ ಮೂಲೆಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ಅದೆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿ ಕುರಣಗೆರೆ, ಚಕ್ಕೂರು, ಮತ್ತು ಕುಕ್ಕೂರು ಗ್ರಾಮಗಳ ಮುಕ್ಕುಪ್ಪೆ ಬಾಂದುಗಳಿಗೆ ಹೋಗುತ್ತದೆ.

ದಕ್ಷಿಣಕ್ಕೆ :—ಅಲ್ಲಿಂದ ನೈರುತ್ಯಕ್ಕೂ, ಪಶ್ಚಿಮಕ್ಕೂ ಕುಕ್ಕೂರು ಗ್ರಾಮದ ಸರ್ವೆ 1ನೆ ನಂಬರಿನ ಉತ್ತರ ಮೇರೆಯಲ್ಲಿ ಅದರ ವಾಯವ್ಯ ಮೂಲೆಗೆ ಹೋಗಿ, ಅಲ್ಲಿಂದ ವಾಯವ್ಯಕ್ಕೆ ಸರ್ವೆ 11ನೆ ನಂಬರಿನ ಪೂರ್ವಮೇರೆಯಲ್ಲಿ ಅದರ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ಸರ್ವೆ 101ನೆ ನಂಬರಿನ ಪೂರ್ವಮೇರೆಯಲ್ಲಿ ಸುಮಾರು 3 ಸರಪಣಿಗಳ ದೂರ ಹೋಗಿ ಅಲ್ಲಿಂದ ಪಶ್ಚಿಮಕ್ಕೆ ಅದೇ ಮೇರೆಯಲ್ಲಿ ಸುಮಾರು 10 ಸರಪಣಿಗಳ ದೂರ ಹೋಗಿ, ಅಲ್ಲಿಂದ ನೈರುತ್ಯಕ್ಕೆ ಅದೇ ಮೇರೆಯಲ್ಲಿ ಸುಮಾರು 10 ಸರಪಣಿಗಳ ದೂರ ಹೋಗಿ, ಅಲ್ಲಿಂದ ವಾಯವ್ಯಕ್ಕೆ ಅದೇ ಮೇರೆಯಲ್ಲಿ ಸುಮಾರು 20 ಸರಪಣಿಗಳ ದೂರ ಹೋಗುತ್ತದೆ.

ಪಶ್ಚಿಮಕ್ಕೆ :—ಅಲ್ಲಿಂದ ಕುಕ್ಕೂರು ಗ್ರಾಮದ ಸರ್ವೆ 101ನೆ ನಂಬರಿನ ಪೂರ್ವ ಭಾಗದಲ್ಲಿ ಅದರ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ಮರ್ಜನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವ ಮೇರೆಯಲ್ಲಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

A ಷರಾಗಳು—

ಈ ಕೆಳಗೆ ನಮೂದಿಸುವ ಸಾರ್ವಜನಿಕವಾದ ಹಕ್ಕುಗಳನ್ನು ಜನಗಳೂ ಮತ್ತು ದನಗಳೂ ವರ್ಷವಲ್ಲಾ ಉಪಯೋಗಿಸಿ ಕೊಳ್ಳಬಹುದೆಂದು ಒಪ್ಪಿಕೊಂಡಿದೆ :—

1. (i) ಕುರಣಗೆರೆಯಿಂದ ಮರ್ಜನಹಳ್ಳಿಗೆ ಹೋಗುವ ದನಗಳ ದಾರಿ, 12 ಅಡಿಗಳ ಅಗಲ; ಇದು ಕುರಣಗೆರೆ ಗ್ರಾಮದ ಸರ್ವೆ 148ನೆ ನಂಬರಿನ ಪಶ್ಚಿಮ ಪಾರ್ಶ್ವದ ಸುಮಾರು ಮಧ್ಯಭಾಗದಲ್ಲಿ ರಿಸರ್ವ್ ಜಂಗಲಿಯನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಸುಮಾರು 50 ಸರಪಣಿಗಳ ದೂರ ಹೋಗಿ, ಮರ್ಜನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವಭಾಗದಲ್ಲಿ ಅದರ ಆಗ್ನೇಯ ಮೂಲೆಯಿಂದ ಉತ್ತರಕ್ಕೆ ಸುಮಾರು 30 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(ii) ಕುರಣಗೆರೆಯಿಂದ ಕುಕ್ಕೂರಿಗೆ ಹೋಗುವ ಕಾಲುದಾರಿ, 4 ಅಡಿಗಳ ಅಗಲ. ಇದು (i)ನೆ ದಾರಿಯು ಜಂಗಲಿಯನ್ನು ಪ್ರವೇಶಿಸುವ ಸ್ಥಳದಿಂದ 2 ಸರಪಣಿಗಳ ದೂರದಲ್ಲಿ ರಿಸರ್ವ್ ಜಂಗಲಿಯನ್ನು ಪ್ರವೇಶಿಸಿ ಸುಮಾರು 47 ಸರಪಣಿಗಳದೂರ ದಕ್ಷಿಣಕ್ಕೆ ಹೋಗಿ, ಕುಕ್ಕೂರು ಗ್ರಾಮದ ಸರ್ವೆ 101ನೆ ನಂಬರಿನ ಪೂರ್ವ ಮೇರೆಯಲ್ಲಿ (ಸರ್ವೆ 11ನೆ ನಂಬರಿನ ಈಶಾನ್ಯ ಮೂಲೆಗೆ ಸರಿಯಾದ) ಆ ನಂಬರಿನ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 8 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.